ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **341/ 2021**

| | | |
|---|---|---|
| ಸಾಕ್ಷಿಯ ಹೆಸರುಃ | ಬಸವರಾಜ | ಪ್ರಾಸಾಃ 1 |
| ಗಂಡನ/ತಂದೆಯ ಹೆಸರುಃ | ಚಂದ್ರಾಮಪ್ಪ | ಚಾಸಾಃ 4 |
| ವಯಸ್ಸುಃ | 50 ವರ್ಷ | ದಿಃ 16-01-2024 |
| ಉದ್ಯೋಗಃ | ಹೊಟೆಲ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ನನ್ನ ಚಿಕ್ಕಮ್ಮ. ಚಾಸಾಃ 5 ನನ್ನ ಹೆಂಡತಿ. ಆರೋಪಿತರ ಪರಿಚಯವಿದೆ. ಸುಮಾರು 5 ವರ್ಷದ ಹಿಂದೆ 5.00 ಗಂಟೆ ಸುಮಾರಿಗೆ ನಾನು, ಚಾಸಾಃ 1, 5 ರವರು ಮನೆಯ ಹತ್ತಿರ ಕುಳಿತಿರುವಾಗ ಆರೋಪಿತರು ಎಲ್ಲರೂ ಬಂದು ಚಾಸಾಃ 1 ರವರಿಗೆ ಹಿಡಿದು ಎಳೆದಾಡಿ, ಕೂದಲು ಹಿಡಿದು ಹೊಡೆದಿರುತ್ತಾರೆ. 1 ನೇ ಆರೋಪಿತನು ಚಾಸಾಃ 1 ರವರಿಗೆ ಕಪಾಳಕ್ಕೆ ಹೊಡೆದಿರುತ್ತಾರೆ. 2 ನೇ ಆರೋಪಿತನು ಚಾಸಾಃ 1 ರವರಿಗೆ ಎಳೆದಾಡಿ ಹೊಡೆದಿರುತ್ತಾನೆ. 3 ನೇ ಆರೋಪಿತನು ಚಾಸಾಃ 1 ರವರಿಗೆ ಎಳೆದಾಡಿ, ಕೈ ಹಿಡಿದು ಎಳೆದಾಡಿ ಕಪಾಳಕ್ಕೆ ಹೊಡೆದಿರುತ್ತಾನೆ. ನಂತರ ಪೋಲಿಸರು ಬಂದು ದೂರು ಪಡೆದುಕೊಂಡಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

1 ನೇ ಆರೋಪಿತನು ಚಾಸಾಃ 1 ರವರಿಗೆ ಸೂಳೆ, ಬಸವಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಚಾಸಾಃ 1 ರವರಿಗೆ ಸುಮ್ಮನೆ ಬಿಡಬೇಡಿ ಖಲಾಸ ಮಾಡಿ ಎಂದು ಜೀವ ಬೆದರಿಕೆ ಹಾಕಿರತ್ತಾರೆ. ನಾನು ಮತ್ತು ಚಾಸಾಃ 5 ರವರು ಜಗಳವನ್ನು ಬಿಡಸಿರುತ್ತೇವೆ ಎಂದರೆ ಸರಿ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲು ಃಆರೋಪಿ ಪರ ಶ್ರೀ.ಎಮ್.ಬಿ. ಪಿ. ವಕೀಲರಿಂದಃ

1. ಸದರಿ ಆರೋಪಿತರು ಜಮೀನು ಸಲುವಾಗಿ ನನ್ನ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಜಮೀನು ಸೈದಾಪೂರದಲ್ಲಿದೆ ಎಂದರೆ ಸರಿ. ಸದರಿ ದಾವೆಯು ಆರೋಪಿತರ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ನಾನು ಅಫೀಲ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಸಿವಿಲ್ ದಾವೆ ಸಲ್ಲಿಸಿದ್ದರಿಂದ ನಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಇದೆ ಎಂದರೆ ಸರಿ. ನನ್ನ ತಂದೆಗೆ ಮಲ್ಲಪ್ಪ, ಶೇಖರಪ್ಪ, ದೊಡ್ಡ ಸಾಬಣ್ಣ, ಬಸಪ್ಪ, ಶರಣಪ್ಪ, ಸಣ್ಣ ಸಾಬಣ್ಣ, ಸುಶೀಲಮ್ಮ ಅಣ್ಣ-ತಮ್ಮಂದಿರು ಆಗಬೇಕು. ಭಾಗಪ್ಪ ನನ್ನ ಚಿಕ್ಕಪ್ಪ. 1 ನೇ ಆರೋಪಿತನು ಶಕ್ತಿ ನಗರದಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ. 1 ನೇ ಆರೋಪಿತನು ನಿವೃತ್ತರಾಗಿ ರಾಯಚೂರಿನಲ್ಲಿ ಇರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರು ಸೈದಾಪೂರದಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ 1 ನೇ ಆರೋಪಿತನು ಸೈದಾಪೂರಕ್ಕೆ ಬರುವುದು-ಹೋಗುವುದು ಮಾಡುತ್ತಾನೆ.

2. ಸದರಿ ನನ್ನ ಮತ್ತು ಆರೋಪಿತರ ಮನೆಯ ನಡುವೆ 7-8 ಮನೆಗಳು ಇವೆ. ಸದರಿ ಸಿವಿಲ್ ದಾವೆ ಇರುವುದರಿಂದ ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಕಾರ್ಯಕ್ರಮದಲ್ಲಿ ಹೋಗುವುದು-ಬರುವುದು ಮಾಡುವುದಿಲ್ಲ ಎಂದರೆ ಸರಿ. ದಿನಾಂಕಃ 21-04-2021 ರಂದು ನಾನು, ಚಾಸಾ1 ಮತ್ತು 5 ರವರು ನಮ್ಮ ಮನೆಯ ಹತ್ತಿರ ಕುಳಿತಿರುತ್ತೇವೆ ಎಂದು ಹೇಳಿಕೆ ನೀಡಿರುತ್ತೇನೆ. ನಮ್ಮ ಮನೆಯ ಹತ್ತಿರ 8 ಮನೆಗಳು ಇವೆ. ಸದರಿ ಮನೆಯಲ್ಲಿ ಯಾರೂ ಇರುವುದಿಲ್ಲ. ಸದರಿ ಆರೋಪಿತರ ಮನೆಗಳು ದೂರ ಇರುವುದರಿಂದ ನನ್ನ ಮನೆಗೆ ಬರುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಾನು ಪೊಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರಿನಲ್ಲಿ ನಾನು ಹೇಳಿರುವ ಹೇಳಿಕೆಯನ್ನು ಬರೆದಿರುತ್ತಾರೆ. 1 ನೇ ಆರೋಪಿತನು ಕೈಯಿಂದ ಕಪಾಳಕ್ಕೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದು, ಕೂದಲು ಹಿಡಿದು ಎಳೆದಾಡಿ, ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾಃ 5 ರವರು ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ